SRI H.V. KOUJALGI: - I do not know what is his interest or my interest. I am sorry that my friend is putting such a question. This recommendation has been accepted by State Advisory Body which is constituted under the State Reorganisation Act and accordingly they have been promoted.

SRI C. K. RAJAIAH SETTY:—These Avalkarkuns happen to com only from Bombay Karnatak area. May Iput it to the Hon.Minister that just because the Committee which was constituted to go into the equation of posts comprised of members coming from the Bombay Karnatak area, the Committee equated the posts of Avalkarkuns with those of Deputy Tahasildars.

SRI H. V. KOUJALGI:—I am very sorry for the question. The Committee consisted of the Chairman of the public service Commission, one representative from the Central Government and one representative from the state Government. posts corresponding to these Avalkarkuns are differently named in different areas of the state. in the *Ex*-Mysore area, they are called Deputy Tahsildars; in Bombay Karnatak area, they are called Avalkarkuns' there is no difference in their status.

SRI G. CHANDRAKANTH:—would the Hon. Minister at least come to the conclusion, now that they are illegal promotions in view of the fact that many of the officers who were deprived of promotion, have prefered writ petitions and in many cases stay orders have been granted ? have such instances come to the notice of the Government?

SRI H. V. KOUJALGI:—This is not an illegal Promotion I do not knew if in any writ petition stay has been granted.

MR . DEPUTY SPEAKER:—I put Held Over Question No. 78 of Sri, H. N. Nanje Gowda.—

COLLECTION AND REMISSION OF LAND REVENUE

78. SRI H. N. NANJEGOWDA (Arkalgud). —

will the Minister for Revenue be pleased to state:—

(*a*) the land revenue demand in each district (figures for each year from 1956 up to the end of October, 1969 be furnished);

(*b*) the amount of land revenue collected so far and the arrears thereon in each district (ngures from 1956 up to the end of October 1969 be furnished);

(SRI H. N. NANGAGOWDA)

(*c*) the amount of the Remission of land revenue granted in each district (figures from 1956 up to the end of October,1969 to be furnished) ?

SRI H. V. KOUJALGI (Minister for Revenue):—

(*a*) vide Statement I placed on the Table of the House.

(*b*) vide Statement II and III placed on the Table of the House.

(*c*) vide Statement IV placed on the Table of the House.

Copies placed in the Mysore legislative library.

ಶ್ರೀ ಹೆಚ್. ಎನ್. ನಂಜೇಗೌಡ:—ಸ್ವಾಮಿ, ೧೯ ಜಿಲ್ಲೆಗಳಿಗೆ ೩ಕೋಟಿ ೬೦ ಲಕ್ಷ ೭೨ಸಾವಿರದ ೬೪ ರೂಪಾಯಿ ರೆಮಿಷನ್ ಕೊಟ್ಟಿದ್ದೀರಿ, ಅದರಲ್ಲಿ ಗುಲ್ಬರ್ಗ, ಬಿಜಾಪುರ,ಬೆಳಗಾಂ, ಬಿದರೆ, ಧಾರವಾಡ ಈ ಜಿಲ್ಲೆಗಳಿಗೆ ೨ಕೋಟಿ ೧೧ ಲಕ್ಷ ಚಿಲ್ಲರೆ ಆಗುತ್ತದೆ. ಈ ಐದು ಜಿಲ್ಲೆಗಳಿಗೆ ಜಾಸ್ತಿ ಕೊಟ್ಟು ಉಳಿದ ಜಿಲ್ಲೆಗಳಿಗೆ ಕಡಿಮೆ ರೆಮಿಷನ್ ಕೊಡುವುದಕ್ಕೆ ಕಾರಣ ಏನು?

ಶ್ರೀ ಹೆಚ್. ವಿ. ಕೌಜಲಗಿ:—ರೆಮಿಷನ್‌ಗೆ ಪ್ರಪೋಸಲ್ಸ್‌ನ್ನು ಡೆಪ್ಯೂಟಿ ಕಮೀಷನರು ಆಯಾಯ ಕಾಲಕ್ಕೆ ಹೇಗೆ ಹೇಗೆ ಕಳುಹಿಸಿದ್ದಾರೋ ಅದರಂತೆ ಕೊಟ್ಟಿದೆ. ಒಮ್ಮೆಲೇ ಪ್ರಪೋಸಲ್ಸ್ ಬರುವುದಿಲ್ಲ. ಇನ್ನೂ ಪ್ರಪೋಸಲ್ಸ್ ಕೆಲವು ಬರಬೇಕಾದ್ದು ಇವೆ ಮತ್ತು ಕೆಲವುಭಾಗದ್ದೂ ಬರತಕ್ಕವು ಇವೆ. ಇದರ ಬಗ್ಗೆ ಯಾವುದೂ ಫೈನಲೈಸ್ ಆಗಿಲ್ಲ.

ಶ್ರೀ ಹೆಚ್.ಎನ್. ನಂಜೇಗೌಡ:—ತಾವು ೧೯೫೬ ರಿಂದ ೧೯೬೮-೬೯ ರವರೆಗೂ ಅಂಕಿಅಂಶಗಳನ್ನು ಕೊಟ್ಟಿದ್ದೀರಿ. ಈ ೫ ಜಿಲ್ಲೆಗೆ ಹೆಚ್ಚು ಹಣವನ್ನು ಒದಗಿಸಿರುವುದನ್ನು ನೋಡಿದರೆ ಈ ಹೆಚ್ಚು ೫ ಜಿಲ್ಲೆಯಲ್ಲೆ ಹೆಚ್ಚು ಕ್ಷಾಮ ಇದೆ, ಉಳಿದ ಜಿಲ್ಲೆಯಲ್ಲಿ ಕ್ಷಾಮ ಇಲ್ಲ ಎನ್ನುವ ಭಾವನೆಯೇ?

ಶ್ರೀ ಹೆಚ್.ವಿ. ಕೌಜಲಗಿ:—ಮಾನ್ಯಸದಸ್ಯರಿಗೆ ಗೊತ್ತಿರಬಹುದು. ಈ ನಾಲ್ಕುಜಿಲ್ಲೆಯಲ್ಲಿ ರೆಮಿಷನ್ ಆಗಲಿ, ಆಥವಾ ಸಸ್ಪನಷನ್ ಆಗಲಿ ಕೊಡುವಂಥಾದ್ದು ನಿಯಮಗಳು ಮೊದಲಿನಿಂದಲೂ ಇದ್ದವು. ಉಳಿದ ಭಾಗದಲ್ಲಿ ಈ ನಿಯಮಗಳು ಇರಲಿಲ್ಲ. ಈ ನಿಯಮವನ್ನು ೧೯೫೫ನೇ ಇಸವಿಯಲ್ಲಿ ರೆಟ್ರಾಸ್ಪೆಕ್ಟೀವ್ ಎಫೆಕ್ಟ್ ಆಗಿ ಕೊಟ್ಟಿದ್ದರಿಂದ ಅವರಿಗೆ ಹಿಂದಿನ ಲೆಕ್ಕ ಈಗ ಮಾಡಬೇಕಾಗಿದೆ.

ಶ್ರೀ ಹೆಚ್. ಎನ್. ನಂಜೇಗೌಡ:—ತಾವು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದು ಆಣೆ ರೆಮಿಷನ್ ಕೂಡ ಕೊಟ್ಟಿಲ್ಲ. ಅಲ್ಲಿ ಕ್ಷಾಮ ಪರಿಹಾರ ಸಂದರ್ಭ ಇರಲಿಲ್ಲವೇ? ಆರೀತಿ ಒಂದು ಆಣೆಯೂ ರೆಮಿಷನ್ ಕೊಡದೇ ಇರುವುದಕ್ಕೆ ಕಾರಣ ಏನು? ಅದನ್ನು ಪುನಃ ಪರಿಶೀಲನೆ ಮಾಡುತ್ತೀರಾ?

ಶ್ರೀ ಹೆಚ್.ವಿ.ಕೌಜಲಗಿ:— ಅಲ್ಲಿಗೆ ರೆಮಿಷನ್ ಬೇಕೋ ಬೇಡವೋ ಪ್ರಪೋಸಲ್ಸ್‌ನ್ನು ಕಳುಹಿಸುವ ಕೆಲಸ ಡೆಪ್ಯೂಟಿ ಕಮೀಷನರದ್ದು. ಎಲ್ಲಾ ಜಿಲ್ಲಾಧಿಕಾರಿಗಳಿಗೂ ಆದೇಶ ಕೊಟ್ಟಿದ್ದೇವೆ. ಎಲ್ಲಿಗೆ ರೆಮೀಷನ್ ಕೊಡಬೇಕು ಅದರ ಪ್ರಪೋಸಲ್ಸ್‌ನ್ನು ಅವರು ಕಳುಹಿಸುತ್ತಾರೆ. ಅವರು ಈಗ ಪ್ರಪೋಸಲ್ ಕಳುಹಿಸಿದ್ದಾರೋ ಇಲ್ಲವೋ ಹೇಳುವುದಕ್ಕೆ ಬರುವುದಿಲ್ಲ.

ಶ್ರೀ ಎಸ್. ಶಿವಪ್ಪ;—ಈಗ ಮಾನ್ಯ ಸಚಿವರು ಹೇಳಿದರು ಉತ್ತರ ಕನ್ನಡ ಜಿಲ್ಲೆಯಲ್ಲಿ ಕಾನೂನು ಬೇರೆ ಇತ್ತು, ಅಲ್ಲಿಗೇ ಶೀಘ್ರವಾಗಿ ಪರಿಹಾರ ಕೊಟ್ಟೆವು. ಮೈಸೂರಿನಲ್ಲಿ ಕಾನೂನು ಇತ್ತೀಚೆಗೆ ಬದಲಾವಣೆ ಆದ್ದರಿಂದ ಪರಿಹಾರವನ್ನು ಕೊಡುವುದಕ್ಕೆ ತಡವಾಯಿತು ಎಂದು. ನಾನಾದರೂ ಕೇಳುತ್ತೇನೆ ೧೯೬೫-೬೬, ೬೬-೬೭, ೬೮-೬೯ ನೇ ಇಸವಿಯವರೆಗೂ ಕ್ಷಾಮ ಹಳೆಯ ಮೈಸೂರಿನ ಅನೇಕ ಜಿಲೆ ಗಳಲ್ಲಿ ಇರತಕ್ಕದು

ಸದಸ್ಯರೆಲ್ಲರಿಗೂ ಗೊತ್ತಿದೆ. ಇಷ್ಟಾದರೂ ಕೂಡ ಹೊಸ ನಿಯಮಗಳು ಬಂದು ಎರಡು ವರ್ಷಗಳಾದರೂ ಕೂಡ ಇದುವರೆಗೆ ಯಾವ ಪರಿಹಾರವನ್ನೂ ಕೊಡದೆ ಕಂದಾಯ ವಿನಾಯಿತಿಯೇ ಆಗಲಿ ಯಾವುದೇ ಆಗಲಿ ಕೊಡುವುದಕ್ಕೆ ತಾತ್ಸಾರ ಮನೋಭಾವನೆ ಮಾಡಿರುವುದಕ್ಕೆ ಕಾರಣ ಏನು ?

ಶ್ರೀ ಹೆಚ್. ವಿ. ಕೌಜಲಗಿ:—ಇದರಲ್ಲಿ ತಾತ್ಸಾರ ಮನೋಭಾವನೆ ಯಾವುದೂ ಇಲ್ಲ. ಮಾನ್ಯ ಸದಸ್ಯರು ೧೯೬೮-೬೯ ಅಕ್ಟೋಬರ್‌ರವರೆಗೆ ಕೇಳಿದ್ದಾರೆ. ಆದುದರಿಂದ ಅಲ್ಲಿಯವರೆಗೆ ಫಿಗರ್ಸ್ ಕೊಟ್ಟಿದ್ದೆವೆಯೇ ಹೊರತು ಆಪ್‌ಟುಡೇಟ್ ಫಿಗರ್ಸ್ ಬೇಕು ಎಂದು ಕೇಳಿದ್ದರೆ ಅದನ್ನು ಕೊಡಬಹುದಾಗಿತ್ತು. ಆದರೆ ಅವರಿಂದ ಸೂಚನೆಯೇ ಬರುವುದು ತಡವಾಗುತ್ತಿದೆಯೇ ಹೊರತು ಇದರಲ್ಲಿ ತಾತ್ಸಾರ ಮನೋಭಾವನೆ ಏನು ಇಲ್ಲ.

ಶ್ರೀ ಎಸ್. ಶಿವಪ್ಪ:—ಕೆಲವು ಜಿಲ್ಲೆಗಳಿಂದ ಸ್ಥಳೀಯ ಅಧಿಕಾರಿಗಳಿಂದ, ಕೆಲವು ಡೆಪ್ಯೂಟಿಕಮೀಷನರು ಗಳಿಂದ ಕೆಲವು ಶಿಫಾರಸುಗಳು ಸರ್ಕಾರಕ್ಕೆ ಕಳುಹಿಸಿದರೂ ಕೂಡ ಅದು ೧-೨ ವರ್ಷವಾಗಿದ್ದರೂ ಆ ದಾಖಲೆಗಳ ಮೇಲೆ ಇನ್ನೂ ತೀರ್ಮಾನ ಕೊಡದೇ ಇರವುದಕ್ಕೆ ಕಾರಣ ಏನು?

ಶ್ರೀ ಹೆಚ್. ವಿ. ಕೌಜಲಗಿ:—ಯಾವ ಪ್ರಪೋಸಲ್ಸ್ ಆಗಲಿ ನಮ್ಮಲ್ಲಿ ಡಿಲೇ ಆಗುವುದಿಲ್ಲ. ಜಿಲ್ಲಾಧಿಕಾರಿ ಗಳಿಗೆ ಹೆಚ್ಚು ಅಧಿಕಾರ ಇದೆ. ಅವರ ಶಿಫಾರಸ್ಸೇ ಕಡೆಯ ತೀರ್ಮಾನ. ಅವರು ಶಿಫಾರಸ್ಸು ಮಾಡಿ ಸರ್ಕಾರಕ್ಕೆ ಫಾರ್ಮಲ್ ಅಪ್ರೂವಲ್‌ಗೆ ಕಳುಹಿಸುತ್ತಾರೆ. ಆ ರೀತಿ ಬಂದ ೮-೧೦ ದಿನಗಳಲ್ಲೆ ನಮ್ಮ ಆಫೀಸಿನಲ್ಲಿ ವಿಲೇವಾರಿ ಮಾಡಲಾಗುತ್ತದೆ. ನಮ್ಮಲ್ಲಿ ಡಿಲೇ ಆಗುವುದಿಲ್ಲ.

ಶ್ರೀ ಬಿ. ಪಿ. ಗಂಗಾಧರ್:—ತುಮಕೂರು ಜಿಲ್ಲೆಯಲ್ಲಿ ೪ ವರ್ಷದಿಂದಲೂ ಕೂಡ ಭೀಕರ ಕ್ಷಾಮ ಇದ್ದುದು ಎಲ್ಲರಿಗೂ ಗೊತ್ತಿದೆ ಆದುದರಿಂದ ಅಲ್ಲಿ ಮಳೆ ಬೆಳೆ ಆಗದಿದ್ದುದರಿಂದ ಅಲ್ಲಿಗೆ ರೆಮಿಷನ್ ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ? ಇದರ ಬಗ್ಗೆ ಡೆಪ್ಯೂಟಿ ಕಮೀಷನರ್ ಏನಾದರೂ ಅಡ್ವರ್ಸ್‌ರಿಪೋರ್ಟ್ ಕಳುಹಿಸಿದ್ದರೆ ಪುನಃ ಅದನ್ನು ಬರೆದು ತರಿಸಿಕೊಂಡು ಅಮೇಲೆ ಆ ಜಿಲ್ಲೆಯಿಂದ ಬಂದಿರತಕ್ಕಂಥ ವಿಧಾನ ಸಭಾ ಸದಸ್ಯರ ಅಭಿಪ್ರಾಯವನ್ನೂ ತೆಗೆದುಕೊಂಡು ರೆಮಿಷನ್ ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಹೆಚ್.ವಿ. ಕೌಜಲಗಿ:— ತುಮಕೂರು ಜಿಲ್ಲೆಗೆ ಡೆಪ್ಯೂಟಿ ಕಮೀಷನರ ರೆಕಮೆಂಡೇಷನ್ ಪ್ರಕಾರ ಕೊಟ್ಟಿದೆ. ಇನ್ನೂ ಪ್ರಪೋಸಲ್ಸ್ ಬರತಕ್ಕದ್ದು ಇದೆ.

ಶ್ರೀ ಹೆಚ್.ಎನ್. ನಂಜೇಗೌಡ:—ಸ್ವಾಮಿ, ತಾವು ಏನೋ ಸ್ಟೇಟ್‌ಮೆಂಟ್ಸ್ ಕೊಟ್ಟಿದ್ದೀರಿ. ಅದರಲ್ಲಿ ೧೯೫೯-೬೦ ಮತ್ತು ೧೯೬೮-೬೯ ನ್ನು ಹೋಲಿಸಿ ನೋಡಿದರೆ ಹೊಸದಾಗಿ ವಿಲೀನವಾದಂಥ ಭಾಗಕ್ಕೆ ಭೂಕಂದಾಯ ೧೯ ಸಿ ಪಟ್ಟು ಬರುತ್ತದೆ. ಹಳೆಮೈಸೂರಿನ ೧೯ ರೂಪಟ್ಟು ೧೨ಪಟ್ಟು ಜಾಸ್ತಿ ಆಗಿದೆ ಇದರಲ್ಲಿ ಯಾವುದೂ ಕಡಿಮೆಮಾಡಿಲ್ಲ. ಈ ರೀತಿ ರೆಮಿಷನ್ ಹಾಕುವಾಗ ಕೆಲವು ಭಾಗ ಜಾಸ್ತಿ ಆಗಿ ಕೆಲವು ಭಾಗ ಕಡಿಮೆ ಬರುವುದಕ್ಕೆ ಕಾರಣ ಏನು?

ಶ್ರೀ ಹೆಚ್.ವಿ. ಕೌಜಲಗಿ:—ಮಾನ್ಯ ಸದಸ್ಯರ ಸೂಚನೆಯನ್ನು ಒಪ್ಪಿಕೊಳ್ಳುವುದಿಲ್ಲ ಕೆಲವು ಭಾಗದಲ್ಲಿ ಹೊಸದಾಗಿ ರಿಸೆಟಲ್‌ಮೆಂಟ್ ಮಾಡಿದರು. ಆ ಪ್ರಕಾರ ಕೆಲವು ಭಾಗದಲ್ಲಿ ಹೆಚ್ಚು ಕಡಿಮೆ ಬರುತ್ತದೆ. ಅದರ ಅಂಕಿಅಂಶಗಳನ್ನೂ ಕೊಟ್ಟಿದ್ದೇನೆ. ಆಪ್ರಕಾರ ಚೌಕಾಶಿ ಏನೂಮಾಡಿಲ್ಲ. ಹೊಸ ಕಾಯಿದೆ ಪ್ರಕಾರ ಮಾಡಿದ್ದೇವೆ. ಆ ಕಾಯಿದೆಯಂತೆ ಅಮರ್‌ನಲ್ಲಿ ನಡೆಸಿದ್ದೇವೆ.

ಶ್ರೀ ಹಂಜಿ ಶಿವಣ್ಣ:—ಸ್ವಾಮಿ, ಶ್ರೀಮಾನ್ ಗಂಗಾಧರ್‌ರವರು ಹೇಳಿದ ಹಾಗೆ ತುಮಕೂರು ಜಿಲ್ಲೆ ಯಲ್ಲಿ ೪ ವರ್ಷದಿಂದಲೂ ಮಳೆ ಹೋಗಿ ಜನಗಳು ಸಂಕಷ್ಟ ಸ್ಥಿತಿಯಲ್ಲಿದ್ದಾರೆ. ೧೯೬೫ರಿಂದ ಈಚೆಗೆ ಹೊಸ ಕಂದಾಯವನ್ನು ಹೇರಿದ್ದೀರಿ. ೧೯೬೭ ರ ಮುಂಚೆ ಕಂದಾಯವನ್ನು ಮಾಫಿ ಮಾಡುತ್ತೇವೆಂದು ಜನತೆಗೆ ಭರವಸೆ ಕೊಟ್ಟಿದ್ದರು. ಆದ್ದರಿಂದ ಮತ್ತೊಮ್ಮೆಯಾದರು ಇದನ್ನು ಪರಿಶೀಲನೆ ಮಾಡಿ ಹಿಂದೆ ಏನು ಮಾತು ಕೊಟ್ಟಿದ್ದರೋ ಆದರಂತೆ ನಡೆಮಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ? ನೀವು ಹೇಳುತ್ತೀರಾ ಜಿಲ್ಲಾಧಿಕಾರಿಗಳ ರಿಪೋರ್ಟಿನಮೇಲೆ ಪರಿಶೀಲನೆ ಮಾಡುತ್ತೇವೆ ಎಂದು. ಜಿಲ್ಲಾಧಿಕಾರಿಗಳಿಗೆ ರೈತರ ಹೊಟ್ಟೆ ನೋವು ಗೊತ್ತಾಗುವುದಿಲ್ಲ ತಮಗಂತೂ ಹೊದಲೇ ಗೊತ್ತಾಗುವುದಿಲ್ಲ. ಆದರಿಂದ ದೊಡ್ಡ ಮನಸ್ಸು ಮಾಡಿ ಈ ಕಂದಾಯವನ್ನು ಮಾಫಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಹೆಚ್. ವಿ. ಕೌಜಲಗಿ:—ಕಂದಾಯವನ್ನು ಮಾಫಿ ಮಾಡುವಂಥ ಪ್ರಶ್ನೆ ಬಗ್ಗೆ ಮೊನ್ನೆ ದಿವಸವೆ ತಿಳಿಸಿದ್ದೇನೆ. ೪ ವರ್ಷ ಮುಂಬೆ ರೆಮಿಷನ್ ಕೊಡುವಂಥ ಪ್ರಶ್ನೆ ಇದ್ದರೆ ಆಲ್ಲಿಯ ಸ್ಥಳೀಯ ಅಧಿಕಾರಿಗಳ ರೆಕಮೆಂಡೇಷನ್ ಪ್ರಕಾರ ಪರಿಶೀಲನೆ ಮಾಡಬೇಕಾಗಿದೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ:—ಸ್ವಾಮಿ ತುಮಕೂರು ಜಿಲ್ಲೆಯಲ್ಲಿ ಡೆಪ್ಯೂಟಿ ಕಮೀಷನರು ಎಷ್ಟುಲಕ್ಷ ರೂಪಾಯಿಗಳನ್ನು ರೆಮಿಷನ್ ಕೊಡಬೇಕೆಂದು ತಿಳಿಸಿದ್ದರು. ಅದರಲ್ಲಿ ತಾವು ಎಷ್ಟು ಕೊಟ್ಟಿದ್ದಿರಿ ಎಂದು ತಿಳಿಸುತ್ತೀರಾ?

ಶ್ರೀ ಹೆಚ್.ವಿ.ಕೌಜಲಗಿ:—೧೯೬೯ನೇ ಅಕ್ಟೋಬರ್‌ರವರೆಗೆ ಕೆಲವು ಜಿಲ್ಲೆಗಳಿಗೆ ಕೊಟ್ಟಿದೆ ಇವೆ. ಇನ್ನೂ ಪ್ರಪೋಸಲ್ ಬರತಕ್ಕದ್ದು ಇದೆ. ಎಲ್ಲಿ ಎಲ್ಲಿ ರೆಮಿಷನ್ ಕೊಡಬೇಕು ಅಂತ ಪ್ರಪೋಸಲ್ಸ್ ಬರುತ್ತದೋ ಅದರಂತೆ ಕೊಡಬೇಕಾಗುತ್ತದೆ. ಆದುದರಿಂದ ಈಗಲೇ ಅದನ್ನು ಹೇಳುವುದಕ್ಕಾಗುವುದಿಲ್ಲ.

ಶ್ರೀ ಬಿ. ಗಂಗಣ್ಣ:—ಸ್ವಾಮಿ, ತುಮಂಕೂರು ಜಿಲ್ಲೆಯ ಡೆಪ್ಯೂಟಿ ಕಮೀಷನರ್ ರಿಪೋರ್ಟ್ ಬರೆದು ಡಿವಿಷನಲ್ ಕಮೀಷನರಿಗೆ ಕಳುಹಿಸಿ ಸುಮಾರು ೫ ತಿಂಗಳಾಯಿತು. ಆ ರಿಕಾರ್ಡ್ ಆಲ್ಲೇ ಉಳಿದಿದೆ. ಅದನ್ನು ಜಾಗ್ರತೆ ತರಿಸಿ ಫೈನಲೈಸ್ ಮಾಡುತ್ತೀರಾ?

ಶ್ರೀ ಹೆಚ್.ವಿ. ಕೌಜಲಗಿ:—ಈ ತರಹ ಕಾಲವೇಳೆ ಆಗಿದ್ದರೆ ತೀವ್ರವಾಗಿ ಆ ರಿಕಾರ್ಡನ್ನು ತರಿಸಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಚ್. ಎನ್. ನಂಜೇಗೌಡ:—ಇಲ್ಲಿಯವರೆಗೆ ೬೨ ಲಕ್ಷದ ೫೧ ಸಾವಿರ ಚಿಲ್ಲರೆ ರೂಪಾಯಿಗಳನ್ನು ವಸೂಲಿ ಮಾಡಿದ್ದೀರಿ. ಇನ್ನೂ ೭ ಕೋಟಿ ರೂಪಾಯಿಗಳವರೆಗೆ ಮಾಡಬೇಕಾಗಿದೆ. ಬೆಳಗಾಂ, ಚಿತ್ರದುರ್ಗ ಮತ್ತು ಬಿದರೆ, ಈ ಜಿಲ್ಲೆಗಳಿಂದ ವಸೂಲಿಯಾಗಬೇಕಾಗಿರುವುದು ಭಾರಿಯಿರುವುದಕ್ಕೆ ಕಾರಣವೇನು ? ಚಿತ್ರದುರ್ಗ ಜಿಲ್ಲೆ ನಿಜಲಿಂಗಪ್ಪನವರ ಜಿಲ್ಲೆ, ಬೆಳಗಾಂ ತಮ್ಮ ಜಿಲ್ಲೆ ಮತ್ತು ಬಿದರೆ ತಮಗೆ ಬೇಕಾದವರ ಜಿಲ್ಲೆ ಎಂದು ಕಡಿಮೆ ವಸೂಲಿ ಮಾಡಿ ಉಳಿದ ಜಿಲ್ಲೆಗಳಲ್ಲಿ ಕಡ್ಡಾಯವಾಗಿ ವಸೂಲಿ ಮಾಡುವುದಕ್ಕೆ ಕಾರಣವೇನು ? ಬೆಳಗಾಂ, ಬಿದರೆ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಕಡ್ಡಾಯವಾಗಿ ವಸೂಲಿ ಮಾಡುವುದಕ್ಕೆ ಏತಕ್ಕೆ ಕ್ರಮ ತೆಗೆದುಕೊಳ್ಳಲಿಲ್ಲ ಎಂಬುದನ್ನು ಹೇಳುತ್ತೀರಾ ?

Sri H. V. KOUJALGI:—I do not admit the insinuation. The suggestion is not correct.

Mr. DEPUTY SPEAKER:—Question hour is over.

QUESTIONS FOR ANSWERS ON THE DAY

(but not taken up)

Necessity of Roads In Belgaum District.

306. Sri P. B. NANDIHALLI (Uchagaon): —

Will the Minister for Public Works be pleased to State:—

(*a*) Whether Government is aware that there is a great necessity of the following roads in Belgaum Taluk;